**ದಿನಾಂಕಃ14.12.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಹೆಚ್ ಸಿ ವಕೀಲರಿಂದಃ-**

ಘಟನೆಯಾದ ದಿನ ನಾನು ಮನೆಗೆ ವಾಪಾಸು ಹೋದ ಸಮಯ ನೆನಪಿಲ್ಲ. ದೂರನ್ನು ನಾನು ದಿಃ31.10.2022 ರಂದು ದೂರು ನೀಡಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ರಾತ್ರಿ ಸಮಯವಾಗಿತ್ತು, ನಿಖರ ಸಮಯ ನೆನಪಿಲ್ಲ. ನನ್ನ ತಮ್ಮ ಗಿರಿಧರ (ಚಾಸಾ8) ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ. ಘಟನೆಯಾದ ಎಷ್ಟು ದಿನಗಳ ನಂತರ ದೂರು ನೀಡಿರುತ್ತೀರಿ ಎಂದರೆ ಸಾಕ್ಷಿಯು ನಾನು ಘಟನೆಯಾದ ದಿನವೇ ಆಸ್ಪತ್ರೆಯಿಂದ ಪೊಲೀಸರಿಗೆ ಮಾಹಿತಿ ತಿಳಿಸಿರುತ್ತೇವೆ, ಆದರೆ ಪೊಲೀಸರು ಸಿಂಗಟಗೆರೆ ಗ್ರಾಮದಲ್ಲಿ ಜಾತ್ರೆ ಇದೆ ಎಂದು ಕಾರಣ ಹೇಳಿ ಬಂದಿರುವುದಿಲ್ಲ, ನಂತರ ದಿಃ31.10.2022 ಕ್ಕೆ ಬಂದು ದೂರು ಪಡೆದಿರುತ್ತಾರೆ. ನಾನು ಆ ದಿನ ಮಾಹಿತಿ ನೀಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗಲಾಟೆಯು ಕೋಳಿ ಫಾರ್ಮ್ ನ ಮುಂದೆ ಇರುವ ತೋಟದ ಗೇಟಿನ ಎದುರುಗಡೆ ಆಗಿರುತ್ತದೆ. ಸಾಕ್ಷಿಗೆ ಈಗ ಮಹಜರಿನಲ್ಲಿನ ಕಚ್ಚಾ ನಕಾಶೆ ತೋರಿಸಿ ಕೋಳಿ ಪಾರ್ಮ್ ಎಲ್ಲಿ ಇದೆ ಎಂದು ತೋರಿಸಿ ಕೇಳಿದಾಗ ಸಾಕ್ಷಿಯು ನಕಾಶೆಯಲ್ಲಿ ಸ್ಟಾರ್ಟರ್ ಬಾಕ್ಸ್ ಎದುರುಗಡೆ ತೋಟದ ಗೇಟ್ ಇದೆ ಅದರ ಮುಂಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಗಲಾಟೆಯು ಗೇಟಿನ ಹೊರಭಾಗದಲ್ಲಿ ಆಗಿರುತ್ತದೆ. ಆರೋಪಿಗಳ ಚಿಕ್ಕಪ್ಪ ಹೆಸರು ಕೃಷ್ಣಪ್ಪ ಎಂದರೆ ಸರಿ. ಸದರಿ ಕೃಷ್ಣಪ್ಪ ರವರು ನನ್ನ ಮತ್ತು ನನ್ನ ತಂದೆಯ ವಿರುದ್ಧ ದಿಃ04.06.2021 ರಂದು ಕಲ್ಲು ಕಂಬ ಹಾಕುವ ವಿಚಾರವಾಗಿ ದೂರು ನೀಡಿದ್ದರು ಎಂದರೆ ಸರಿ. ಮತ್ತೆ ದಿಃ08.09.2021 ರಂದು ಕಲ್ಲು ಕಂಬ ಹಾಕುವ ವಿಚಾರವಾಗಿ ನಮ್ಮ ವಿರುದ್ಧ ದೂರು ನೀಡಿದ್ದರು ಎಂದರೆ ಸರಿ. ನಮ್ಮ ಮತ್ತು ಆರೋಪಿಗಳ ನಡುವೆ ತಂತಿ ಕಂಬದ ವಿಚಾರವಾಗಿ ವೈಷಮ್ಯವಿತ್ತು ಎಂದರೆ ಸರಿಯಲ್ಲ. ಆರೋಪಿಗಳು ದೂರು ನೀಡಿದ ನಂತರ ವೈಷಮ್ಯ ಬೆಳೆದಿರುತ್ತದೆ.

ಗಲಾಟೆಯಾದ ಜಾಗವನ್ನು ನಾನು ಪೊಲೀಸರಿಗೆ ತೋರಿಸಿಲ್ಲ. ಅದೇ ರೀತಿ ಮು ಮಾ 1 ಮತ್ತು 2 ನ್ನು ಪೊಲೀಸರಿಗೆ ನಾನು ತೋರಿಸಿಲ್ಲ. 1 ಮತ್ತು 2 ನೇ ಆರೋಪಿತರು ಯಾವುದೇ ಗಲಾಟೆ ಮಾಡಿರುವುದಿಲ್ಲ, ಯಾವುದೇ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ದೂರನ್ನು ತಡವಾಗಿ ನೀಡಲು ಕಾರಣವೇನು ಎಂಬ ಬಗ್ಗೆ ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಮಗೆ ಪೊಲೀಸರು ಅವರು ಸಿಂಗಟಗೆರೆಯ ಜಾತ್ರೆಯ ಕರ್ತವ್ಯದಲ್ಲಿ ಇದ್ದ ಕಾರಣ ನಾವು ಲೇಟ್ ಆಗಿ ಬಂದಿರುತ್ತೇವೆ ಎಂದು ತಿಳಿಸಿರುತ್ತಾರೆ. ಈ ವಿಷಯವನ್ನು ಪೊಲೀಸರು ಸೇರಿಸಿರುತ್ತಾರೋ ಇಲ್ಲವೋ ಗೊತ್ತಿಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡದಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.